

# ಕಾಡುವ ಸಿಕೆಲ್ ಸೆಲ್ ಅನೀಮಿಯಾ

**ಸಿಕೆಲ್ ಸೆಲ್ ಅನೀಮಿಯಾ ಒಂದು ರಕ್ತಸಂಬಂಧಿ ಕಾಯಿಲೆ. ಮಕ್ಕಳಿಗೆ ಬರುವ ಈ ಕಾಯಿಲೆ ನಿವಾರಣೆಗೆ ಅಸ್ಥಿಮಜ್ಜೆ ಕಸಿ (ಬೋನ್‌ಮಾರೊ) ಒಂದೇ ದಾರಿ.**

**■ ಉಮಾ ಅನಂತ್**

ಬೆಂಗಳೂರಿನ ಎಂಟು ವರ್ಷದ ಅನ್ವಿಕಾಗೆ ನಿತ್ಯವೂ ವಿಪರೀತ ಜ್ವರ ಬರುತ್ತಿತ್ತು. ತ್ವಚೆ ಬಿಳಿಚಿಕೊಂಡಿದ್ದಲ್ಲದೆ ಕಣ್ಣುಗಳು ನಿಸ್ತೇಜವಾಗಿದ್ದವು. ಈಕೆಯ ಪೋಷಕರು ಜ್ವರಕ್ಕೆ ಔಷಧಿ ಕೊಡಿಸುತ್ತಲೇ ಇದ್ದರೂ ರಕ್ತಪರೀಕ್ಷೆ ಮಾಡಿಸಲೇ ಇಲ್ಲ. ಮಗುವಿಗೆ ಉಸಿರಾಟದ ಸಮಸ್ಯೆ ಆರಂಭವಾದಾಗ ಗಾಬರಿಗೊಂಡು ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದೊಯ್ದರು. ರಕ್ತಪರೀಕ್ಷೆ, ಇಸಿಜಿ, ಎಂಆರ್‌ಐ ಮುಂತಾಗಿ ಸಂಪೂರ್ಣವಾಗಿ ತಪಾಸಣೆ ಮಾಡಿದಾಗ ಅನ್ವಿಕಾ ಸಿಕೆಲ್ ಸೆಲ್ ಅನೀಮಿಯಾದಿಂದ ಬಳಲುತ್ತಿರುವುದು ಪತ್ತೆಯಾಯಿತು.

ಇದೇ ಆಸ್ಪತ್ರೆಯಲ್ಲಿ ಅಸ್ಥಿಮಜ್ಜೆ ಕಸಿಗೆ (ಬೋನ್‌ಮಾರೊ ಟ್ರಾನ್ಸ್‌ಪ್ಲಾಂಟ್) ಒಳಗಾದ ಅನ್ವಿಕಾ ಈಗ ಚೇತರಿಸಿಕೊಂಡಿದ್ದಾಳೆ. ಸಿಕೆಲ್ ಸೆಲ್ ಅನೀಮಿಯಾ ಒಂದು ಆನುವಂಶಿಕ ಕಾಯಿಲೆ. ಹುಟ್ಟುತ್ತಲೇ ಬರುತ್ತದೆ. ಮಗು ಬೆಳೆದಂತೆ ಸಮಸ್ಯೆಗಳು ಉಲ್ಬಣಿಸಲಾರಂಭಿಸುತ್ತವೆ. ಆರಂಭದಲ್ಲೇ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಿದರೆ ಮಗು ಸಹಜವಾಗಿ ಲವಲವಿಕೆಯಿಂದ ಬೆಳೆಯಲು ಸಾಧ್ಯವಾಗುತ್ತದೆ. ಸಮಸ್ಯೆ ತೀವ್ರವಾಗಿ ಉಲ್ಬಣಿಸಿದರೆ ಜೀವಕ್ಕೂ ಸಂಚಕಾರ ತಂದೊಡ್ಡುವ ಕಾಯಿಲೆ ಇದು.

**ಜೂನ್ 19**
**ವಿಶ್ವ ಸಿಕೆಲ್‌ಸೆಲ್ ಅನೀಮಿಯಾ ದಿನ**

‘ಸಿಕೆಲ್ ಸೆಲ್ ಅನೀಮಿಯಾದಲ್ಲಿ ದುಂಡಗಿರಬೇಕಾದ ರಕ್ತ ಕಣಗಳ ಗಾತ್ರ ಕಡೆಗೋಲಿನಂತೆ ಬದಲಾಗುತ್ತದೆ. ಮಕ್ಕಳಲ್ಲಿ ಈ ಕಾಯಿಲೆ ಕಂಡುಬಂದರೂ ಅವರನ್ನು ಬದುಕಿಸಿಕೊಳ್ಳುವ ಸಲುವಾಗಿ ಉತ್ತಮ ಚಿಕಿತ್ಸೆ ಈಗ ಲಭ್ಯವಿದೆ. ಈ ಕಾಯಿಲೆಯು ಸರಿಸುಮಾರು 90 ಮಕ್ಕಳ ಪೈಕಿ ಒಬ್ಬರಲ್ಲಿ ಕಂಡುಬರುತ್ತದೆ. ಹುಟ್ಟಿನಿಂದಲೇ ಬರುವ ಸಿಕೆಲ್ ಸೆಲ್ ಅನೀಮಿಯಾವನ್ನು ನಿರ್ಲಕ್ಷಿಸಲೇಬಾರದು. ಏಕೆಂದರೆ ಮಕ್ಕಳ ದೇಹವನ್ನು ಒಂದು ಸಣ್ಣ ವೈರಸ್ ಕೂಡ ಬಹುಬೇಗ ದಾಳಿ ಮಾಡುವ ಸಾಧ್ಯತೆ ಹೆಚ್ಚು. ಜೊತೆಗೆ ಜೀವಿತಾವಧಿಯವರೆಗೂ ಮೂಳೆಗಳ ನೋವು, ನ್ಯುಮೋನಿಯಾ, ಪಾರ್ಶ್ವವಾಯು, ಗಂಟಲು ನೋವು ಸೇರಿದಂತೆ ಹಲವು ರೀತಿ ಸಮಸ್ಯೆಗಳಿಗೆ ಒಳಗಾಗುವ ಅಪಾಯವಿದೆ. ಮನುಷ್ಯನ ಸರಾಸರಿ ಜೀವಿತಾವಧಿಗಿಂತಲೂ ಈ ಮಕ್ಕಳಿಗೆ 20 ರಿಂದ 30 ವರ್ಷ ಕಡಿಮೆ ಜೀವಿತಾವಧಿ ಇರುತ್ತದೆ. ಹೀಗಾಗಿ ಸಿಕೆಲ್ ಸೆಲ್ ಅನೀಮಿಯಾ ಬಂದ ಮಕ್ಕಳಿಗೆ ಆರಂಭದಲ್ಲೇ ಸೂಕ್ತ ಚಿಕಿತ್ಸೆ ನೀಡಬೇಕು’ ಎಂದು ಹೇಳುತ್ತಾರೆ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ಪೀಡಿಯಾಟ್ರಿಕ್ ಹೆಮಟಾಲಜಿ, ಆಂಕಾಲಜಿ ಹಾಗೂ ಅಸ್ಥಿಮಜ್ಜೆ ಕಸಿ ತಜ್ಞರಾಗಿರುವ ಡಾ. ವಸುಂಧರಾ ಪಿ. ಕೈಲಾಸನಾಥ್.

## ಹೇಗೆ ಬರುತ್ತದೆ? ಲಕ್ಷಣಗಳೇನು?

ಸಿಕೆಲ್‌ಸೆಲ್ ಅನೀಮಿಯಾ ದೇಹದಾದ್ಯಂತ ಜೀವಕೋಶಗಳಿಗೆ ಆಮ್ಲಜನಕವನ್ನು ತಲುಪಿಸುವ ಕೆಂಪು ರಕ್ತ ಕಣಗಳಲ್ಲಿನ ಅಣುವಾದ ಹಿಮೊಗ್ಲೋಬಿನ್ ಮೇಲೆ ಪರಿಣಾಮ ಬೀರುವ ಅಸ್ವಸ್ಥತೆ. ಕೆಂಪು ರಕ್ತಕಣಗಳು ಅಸಹಜ ರೀತಿಯಲ್ಲಿ ಬೆಳವಣಿಗೆ ಹೊಂದಿ, ಅರ್ಧ ಚಂದ್ರಾಕಾರದ ಆಕಾರಕ್ಕೆ ವಿರೂಪಗೊಳ್ಳುತ್ತದೆ.